ತೆಗೆದಿದ್ದೆ. ಅದರಲ್ಲೂ ಮುಖ್ಯವಾಗಿ ತಮಿಳುನಾಡು ಮತ್ತು ಕೇರಳದ ಗಡಿಯಲ್ಲಿರುವ ನೆಲ್ಲಿಯಂಪತಿ ಎಂಬ ಕಗ್ಗಾಡಿಗೆ ಈ ಕಾರಣಕ್ಕಾಗಿಯೇ ಹೋಗಿದ್ದೆ. ಅಲ್ಲಿ ದೊಡ್ಡ ಗಾತ್ರದ ಮಂಗಟ್ಟೆಗಳನ್ನು ಎತ್ತರದ ಮರಗಳ ಮೇಲೆ ನೋಡಿದ್ದೆ. ಅವು ನಾವು ನಿರೀಕ್ಷೆ ಮಾಡಿದಷ್ಟು ಚೆನ್ನಾಗಿ ಕ್ಯಾಮೆರಾದ ಕಣ್ಣಿನ ನೇರಕ್ಕೆ ಸಿಕ್ಕಿರಲಿಲ್ಲ. ವಾಲ್ಪರೈ ಕಾಡಿನಲ್ಲಿ ಸಿಕ್ಕವೂ ಕೂಡ ತೀರಾ ದೂರದ ಚುಕ್ಕೆ ಚಿತ್ರಗಳಾಗಿದ್ದವು.

ನನಗೆ ತೀರಾ ಸನಿಹದಿಂದ ಯಾವ ಅಡೆ ತಡೆಗಳೂ ಇಲ್ಲದ ಪರಿಪೂರ್ಣ ಚಿತ್ರ ಬೇಕಿತ್ತು. ಅದಕ್ಕೆ ಹೇಳಿ ಮಾಡಿಸಿದ ಜಾಗವೇ ಈ ಮಹಾನಂದ ಕಣಿವೆ ಪ್ರದೇಶ. ಬೆಟ್ಟದ ಎತ್ತರದಲ್ಲಿ ನಿಂತರೆ ಕೆಳಗಿನ ಮರಗಳ ಮೇಲೆ ಕಣ್ಣು ಹಾಯಿಸಬಹುದಿತ್ತು. ಮಂಗಟ್ಟೆಗಳನ್ನು ನೋಡಲು ಇಲ್ಲಿ ವಿಪುಲ ಅವಕಾಶಗಳಿದ್ದವು. ನಮ್ಮನ್ನು ಕಾರಿನಲ್ಲಿ ಕರಕೊಂಡು ನ್ಯಾಚುರಲಿಸ್ಟ್ ಹೊರಟಾಗ ನಾನು ಕಣ್ಣು ರೆಪ್ಪೆ ಬಡಿಯದೆ ಗಮನಿಸುತ್ತಲೇ ಇದ್ದೆ.

ತಕ್ಷಣವೇ ಮರದ ತುದಿಗೆ ಒಂದು ದೊಡ್ಡ ಮಂಗಟ್ಟೆ ಹಕ್ಕಿ ಬಂದು ಕೂತದ್ದು ನೋಡಿ ಕೂಗಿಕೊಂಡೆ. 'ಗಾಡಿ ನಿಲ್ಲಿಸು ಗಾಡಿ ನಿಲ್ಲಿಸು' ಎಂದು ಅವಸರಿಸಿದೆ. ರೆಡಿ ಇದ್ದ ಕ್ಯಾಮೆರಾ ಹಿಡಿದು ಕಾರು ಬಾಗಿಲು ತೆಗೆದು ಮೆಲ್ಲನಿಳಿದೆ. ಗ್ರೇಟರ್ ಹಾರ್ನ್ ಬಿಲ್ ಆಗತಾನೆ ಎಲ್ಲಿಂದಲೋ ಹಾರಿ ಬಂದಿತ್ತು. ಚಕಚಕ ಒಂದಿಷ್ಟು ಚಿತ್ರ ತೆಗೆದೆ. ಕ್ಯಾಮೆರಾದ ಕಣ್ನೋಟದಿಂದ ತೀರಾ ಮೇಲಿತ್ತು. ಕ್ಯಾಮೆರಾದ ಮುಖದ ನೇರಕ್ಕೆ ಹಕ್ಕಿ ಕೂತಿರುವ ಭಂಗಿ ಸಿಕ್ಕರೆ ಹಕ್ಕಿಯ ಎಲ್ಲಾ ವಿವರಗಳೂ ಬರುತ್ತವೆ. ಈ ಬಗೆಯ ಪಟಗಳನ್ನು ಐ ಲೆವೆಲ್ ಶಾಟ್ ಎನ್ನುತ್ತೇವೆ. ಅದೇ ಮರದ ತೀರಾ ಮೇಲಿರುವ ಹಕ್ಕಿಯ ಚಿತ್ರ ತೆಗೆದರೆ ಮುಖ ಬಿಟ್ಟು ಕೇವಲ ಪುಷ್ಠಭಾಗವಷ್ಟೇ ಎದ್ದು ಕಾಣುತ್ತದೆ. ಪಟಗಾರರು ನೇರವಾಗಿ ಕ್ಯಾಮೆರಾ ಮೂತಿಗೆ ಸಿಗುವ ಹಕ್ಕಿಯ ಮುಖಚಿತ್ರ ಸಿಗಬೇಕೆಂದು ಬಯಸುತ್ತಾರೆಯೇ ಹೊರತು ಕುಂಡೆಯನ್ನಲ್ಲ.

'ಮುಂದೆ ಕಾಲರ್ ಫಲ್ಕೋನೆಟ್ ಎಂಬ ಮುಖ್ಯ ಪಕ್ಷಿ ಕೂತಿದೆಯಂತೆ. ತಡವಾದರೆ ಅದು ಸಿಗುವುದಿಲ್ಲ. ಹುಡುಗ ಫೋನು ಮಾಡಿ ಬೇಗ ಬನ್ನಿ ಎಂದಿದ್ದಾನೆ. ಮೊದಲು ಅಲ್ಲಿಗೆ ಹೋಗೋಣ ಸರ್' ಎಂದು ರಂತು ಸಾಹು ಅವಸರಿಸಿದ. ನಾಳೆ ಪೂರ್ತಿ ನೀವು ಹಾರ್ನ್ ಬಿಲ್ ಹಿಂದೇನೆ ಬಿದ್ದುಬಿಡಿ. ಇವತ್ತು ಬೇಡ ಎಂದ. ಅವನ ಪ್ಲಾನಿನ ಪ್ರಕಾರವೇ ಆಗಲಿ. ನಾವು ಕಾರ್ಯಕ್ರಮ ಬದಲಿಸುವುದು ಬೇಡ. ಈ ಜಾಗದ ಬಗ್ಗೆ ನಮಗೇನು ಗೊತ್ತು? ಅವನು ಹೇಳಿದ್ದಲ್ಲಿಗೆ ಹೋಗೋಣ ಬಿಡಿ ಎಂದು ದೀಪಕ್ ಹೇಳಿದರು. ಅಪರೂಪಕ್ಕೆ ಮಾತಾಡುವ ಅವರ ಮಾತನ್ನು ಶಿರಸಾ ವಹಿಸಲು ನಾನು ಡಾ. ರಾಘವೇಂದ್ರ ಒಪ್ಪಿಕೊಂಡೆವು.

ಕಾರು ಮತ್ತೆ ಹಾವಿನಂತೆ ಬಳುಕುತ್ತಾ ಘಾಟಿ ರಸ್ತೆಯಲ್ಲಿ ಇಳಿಯತೊಡಗಿತು. ಆತ ನಮಗೆ ತೋರಿಸಲೇಬೇಕು ಎಂದು ಹಠ ತೊಟ್ಟಿದ್ದ ಹಕ್ಕಿ ಕಾಲರ್ ಫಲ್ಕೋನೆಟ್ ಅತ್ಯಂತ ಸಣ್ಣ ಗಾತ್ರದ್ದು. ಅದಲ್ಲದೆ ಬಡ್ಡೀ ಮಗಂದು ತುಂಬಾ ಎತ್ತರದ ಒಣಗಿದ ಮರದ ತುದಿಯಲ್ಲಿ ಕೂತಿತ್ತು. ಇದು ಬೇಟೆಗಾರ ಹಕ್ಕಿ. ಅಲ್ಲದೆ ಪಕ್ಕಾ ಮಾಂಸಾಹಾರಿ. ಇಲ್ಲೇ ಪಕ್ಕದಲ್ಲಿ ಗೂಡು ಕಟ್ಟಿದೆ. ಅಲ್ಲಿ ಕೂತಿರುವುದು ಗಂಡು ಪಕ್ಷಿ. ಶಿಕಾರಿ ತಲಾಶ್ ಮಾಡುತ್ತಿದೆ. ಅದರ ಗೂಡನ್ನು ಬ್ರಹ್ಮ ಬಂದ್ರೂ ಹುಡುಕೋಕೆ ಆಗಲ್ಲ. ಅಷ್ಟು ರಹಸ್ಯವಾಗಿ ತೀರಾ ಒಳಗೆ ಕಟ್ಟುತ್ತೆ ಎಂದು ರಂತೂ ಅದರ ಇತಿಹಾಸ ಹೇಳಿದ.

ಡಾಕ್ಟ್ರು ಮತ್ತು ದೀಪಕ್ ಕಾರಿನಿಂದಿಳಿದು ಗಡಿಬಿಡಿಸಿ ಆ ಪಕ್ಷಿಯ ಫೋಟೋ ತೆಗೆಯಲು ಹೊರಟರು. ಅತ್ಯಂತ ದೂರದಲ್ಲಿ ಕೂತಿದ್ದ ಅದನ್ನು ನಾನೊಮ್ಮೆ ಬೈನಾಕುಲರ್‌ನಲ್ಲಿ ನೋಡಿ ಸುಮ್ಮನೆ ನಿಂತೆ. ತೀರಾ ಸಣ್ಣಹಕ್ಕಿ, ಜೊತೆಗೆ ದೂರವಿದೆ ಎಂದ ಮೇಲೆ ನನ್ನ ಆಸಕ್ತಿ ಇಂಗಿ ಹೋಯಿತು. ಆರು ನೂರು ಎಂ.ಎಂ. ಪ್ರೈಮ್ ಲೆನ್ಸಿನ ದೀಪಕ್ ಪಟ ಚಚ್ಚಿಕೊಂಡರು. ನಿರುತ್ಸಾಹ ಮೂಡಿನಲ್ಲಿದ್ದ ನಾನು ಇರಲಿ ಎಂದು ಒಂದೆರಡು ಪಟ ತೆಗೆದೆ. ಇದು ಸಿಕ್ಕುವುದೇ ದುರ್ಲಭ ಎಂದು ರಂತು ಹೇಳುತ್ತಿದ್ದರೂ ನನಗೆ ಯಾಕೋ ಆ ಹಕ್ಕಿಯ ಮೇಲೆ ಆಸಕ್ತಿ ಹುಟ್ಟಲಿಲ್ಲ. ಇದರ ಜೀವನ ಕ್ರಮದಲ್ಲಿ ಏನಾದರೂ ವಿಶೇಷತೆ ಇದೆಯೇ ಎಂಬುದಷ್ಟೇ ನನ್ನಲ್ಲಿ ಉಳಿದಿದ್ದ ಕುತೂಹಲ.

ಈ ಮಹಾನಂದದಲ್ಲಿ ನೇಮಿಸಿಟ್ಟ ರಂತೂ ಸಾಹು ಕಡೆಯ ಹುಡುಗ ಅಲ್ಲಿದ್ದ. ಕಟ್ಟಿಗೆ ತುಂಡಿನಂತಿದ್ದ ಆತನ ಹೆಸರು ಕುಂದನ್ ಪ್ರಧಾನ್. ಕಾಡಿನ ರಸ್ತೆಗಳಲ್ಲಿ ದಿನವಿಡಿ ಅಲೆದಾಡುವುದು. ಎಲ್ಲೆಲ್ಲಿ ಯಾವ ಯಾವ ಪಕ್ಷಿಗಳಿದ್ದಾವೆ? ವಲಸೆಯ ಬಂದ ಹೊಸ ಪಕ್ಷಿಗಳ ಪಟ್ಟಿ ಎಷ್ಟು? ಅವುಗಳ ದನಿ ಎಲ್ಲಾದರೂ ಕೇಳಿಸಿತೆ? ಗೂಡು ಕಟ್ಟಿರುವ ಪಕ್ಷಿ ಜಾಗ ಪತ್ತೆಯಾಯಿತೇ? ಎಂಬ ಪತ್ತೇದಾರಿ